# ರಾಜಕೀಯ ಕಾಲೇಜು ಪ್ರಾರಂಭಿಸುವ ಚಿಂತನೆ: ಹೊರಟ್ಟಿ

## ಉತ್ತಮ ಜನಪ್ರತಿನಿಧಿಗಳನ್ನು ರೂಪಿಸಲು ಸೂಕ್ತ ಮಾರ್ಗದರ್ಶನ, ತರಬೇತಿ: ಸಭಾಪತಿ | ಬಿ.ಬಸವಲಿಂಗಪ್ಪ ಜನ್ಮ ಶತಮಾನೋತ್ಸವ

**■ ಉದಯವಾಣಿ ಸಮಾಚಾರ**

**ಬೆಂಗಳೂರು:** ರಾಜಕೀಯರಂಗ ಪ್ರವೇಶಿಸುವ ಹೊಸಬರಿಗೆ ಸೂಕ್ತ ತರಬೇತಿ ನೀಡುವ ಉದ್ದೇಶದಿಂದ ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿ ರಾಜಕೀಯ ಕಾಲೇಜು ಆರಂಭಿಸುವ ಚಿಂತನೆ ಇದೆ ಎಂದು ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ಬಸವಲಿಂಗಪ್ಪ ಜನ್ಮ ಶತಮಾನೋತ್ಸವ ಆಚರಣಾ ಸಮಿತಿ, ಬಸವಲಿಂಗಪ್ಪ ಅಭಿವೃದ್ಧಿ ಅಧ್ಯಯನ ಸಂಸ್ಥೆ ಆಯೋಜಿಸಿದ್ದ ಬಿ. ಬಸವಲಿಂಗಪ್ಪ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಿ. ಬಸವಲಿಂಗಪ್ಪ ಮಾದರಿಯಲ್ಲಿ ಜನಪ್ರತಿನಿಧಿಗಳನ್ನು ಸಿದ್ಧಪಡಿಸುವ ಅಗತ್ಯವಿದೆ. ಈ ಉದ್ದೇಶದೊಂದಿಗೆ ರಾಜಕೀಯ ಕಾಲೇಜು ಆರಂಭಿಸುವ ಚಿಂತನೆಯಿದೆ. ಅಲ್ಲಿ ಹೊಸಬರಿಗೆ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿ ನೀಡಿ ಜನರ ಕಷ್ಟಗಳಿಗೆ ಸ್ಪಂದಿಸುವ, ಸಮಾಜದ ಅಭಿವೃದ್ಧಿಗೆ ಶ್ರಮಿಸುವ ಜನಪ್ರತಿನಿಧಿಗಳನ್ನು ರೂಪಿಸಲಾಗುವುದು ಎಂದು ತಿಳಿಸಿದರು.

ಈಗ ಶಾಸನ ಸಭೆಗೆ ಬರುವ ಜನಪ್ರತಿನಿಧಿಗಳಿಗೆ ಬಸವಲಿಂಗಪ್ಪ ಅವರ ವ್ಯಕ್ತಿತ್ವ, ಹೋರಾಟ ಹಾದಿಯೇ ತಿಳಿದಿಲ್ಲ. ಅನೇಕರನ್ನು ಬಸವಲಿಂಗಪ್ಪ ಅವರ ಬಗ್ಗೆ ಪ್ರಶ್ನಿಸಿದರೆ ಮಾಹಿತಿಯೇ ಇಲ್ಲ ಎಂದು ಹೇಳುತ್ತಾರೆ. ಅಂತಹವರಿಗೆಲ್ಲ ಮೊದಲು ಗ್ರಂಥಾಲಯಗಳಿಗೆ ತೆರಳಿ ಬಸವಲಿಂಗಪ್ಪ ಅವರ ಬಗ್ಗೆ ತಿಳಿದುಕೊಳ್ಳುವಂತೆ ಹೇಳುತ್ತೇನೆ. ಬಸವಲಿಂಗಪ್ಪ ಅವರು ತಳ ಸಮುದಾಯದ



ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ಬಿ. ಬಸವಲಿಂಗಪ್ಪ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು.

ಏಳಿಗೆಗೆ ಸಾಕಷ್ಟು ಶ್ರಮಿಸಿದರು. ಅವರ ಸಾಧನೆಯನ್ನು ನಾವೆಲ್ಲ ಸ್ಮರಿಸುವ ಮತ್ತು ಅದನ್ನು ಪಾಲಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ಬಸವಲಿಂಗಪ್ಪ ಅವರು ಕನ್ನಡ ಸಾಹಿತ್ಯದ ಬಗೆಗಿನ ಬೂಸಾ ಹೇಳಿಕೆಯಿಂದ ಬೂಸಾ ಹೋರಾಟ ಶುರುವಾಯಿತು. ಅದು ಆರಂಭವಾಗದಿದ್ದರೆ ಸಾಹಿತ್ಯದ ಒಳ-ಹೊರಗಿನ ಚರ್ಚೆಗಳೇ ನಡೆಯುತ್ತಿರಲಿಲ್ಲ. ಅದರಿಂದಲೇ ಸಾಹಿತ್ಯದಲ್ಲೂ ಸಾಕಷ್ಟು ಬದಲಾವಣೆಗಳಾದವು. ಮಲ ಹೊರುವ ಪದ್ಧತಿಯನ್ನು ರದ್ದು ಮಾಡಿ, ದಲಿತರಿಗೆ ಭೂಮಿಯ ಹಕ್ಕನ್ನು ನೀಡಲು ಪಿಟಿಸಿಎಲ್ ಕಾಯ್ದೆ ಜಾರಿಗೆ ತಂದರು. ಅವರು ತಳ ಹಂತದ ಜನರ ಹಕ್ಕಿಗಾಗಿ ತಮ್ಮ ಜೀವನವಿಡೀ ಹೋರಾಟ ನಡೆಸಿದರು ಎಂದು ಸ್ಮರಿಸಿದರು.

ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಮಾತನಾಡಿ, ಬಿ.ಬಸವಲಿಂಗಪ್ಪ ಅವರು ಈ ರಾಜ್ಯ ಕಂಡ ನೇರ-ನಿಷ್ಠುರ, ಪ್ರಾಮಾಣಿಕ ರಾಜಕಾರಣಿ. ಸದಾ ಸಾಮಾಜಿಕ ಪರಿವರ್ತನೆಯನ್ನು ಬಯಸಿದ್ದ ಅವರು, ಒಬ್ಬ ಶಾಸಕ ಮತ್ತು ಮಂತ್ರಿ ಹೇಗಿರಬೇಕೆಂದು ತೋರಿಸಿದ್ದರು. ಅವರ ಕುರಿತ ಕಾರ್ಯಕ್ರಮ ಮುಂದಿನ ವರ್ಷ ಧಾರವಾಡದಲ್ಲಿಯೇ ಬೃಹತ್ ಸಮಾವೇಶದೊಂದಿಗೆ ನಡೆಯಬೇಕು. ಆ ಮೂಲಕ ಅವರಿಗೆ ವಿಶೇಷ ಗೌರವ ಸಲ್ಲಿಸಬೇಕು ಎಂದು ಆಶಿಸಿದರು.ಕಾರ್ಯಕ್ರಮದಲ್ಲಿ ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಮೇಲ್ಮನೆ ಸದಸ್ಯರಾದ ಎಂ.ಆರ್.ಸೀತಾರಾಂ, ಸುಧಾಮದಾಸ್, ಎಫ್.ಎಚ್. ಜಕ್ಕಪ್ಪನವರ, ರಾಜ್ಯಸಭೆ ಮಾಜಿ ಸದಸ್ಯ ಡಾ.ಎಲ್. ಹನುಮಂತಯ್ಯ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

### ಮಾತಾಡಲ್ಲ ಎಂದ ಮಾಜಿ ಸ್ಪೀಕರ್ ಮೌನ ಮುರಿಯಲಿ: ಸಚಿವ ಎಚ್.ಕೆ.ಪಾಟೀಲ್

ನಾನು ಚಲಾವಣೆ ಇಲ್ಲದ ನಾಣ್ಯದಂತೆ ಆಗಿದ್ದೇನೆ. ಪ್ರತಿಯೊಂದು ಅಕ್ಷರ ಮಾತಾಡುವಾಗಲೂ ಭಯ ಬಿದ್ದು ನಿಯಂತ್ರಣ ಮಾಡಿ ಮಾತಾಡಬೇಕು. ಹೀಗಾಗಿ, ನಾನು ಮಾತನಾಡುವುದನ್ನೇ ನಿಲ್ಲಿಸಿದ್ದೇನೆ ಎಂದು ಮಾಜಿ ಸ್ಪೀಕರ್‌ಕೆ.ಆರ್. ರಮೇಶ್ ಕುಮಾರ್ ಕಾರ್ಯಕ್ರಮದಲ್ಲಿ ಮಾರ್ಮಿಕವಾಗಿ ಹೇಳಿದರು. ಇದಕ್ಕೆ ಅದೇ ವೇದಿಕೆಯಲ್ಲಿ ಪ್ರತಿಕ್ರಿಯಿಸಿದ ಸಚಿವ ಎಚ್.ಕೆ.ಪಾಟೀಲ್, 'ಸ್ಥಾನಮಾನದಲ್ಲಿ ಇರುವವರನ್ನು ಎಚ್ಚರಿಸಬೇಕೆಂದರೆ ವಿಶ್ರಾಂತಿಯಲ್ಲಿ ಇರುವವರು ಮಾತನಾಡಬೇಕು. ಅವರಲ್ಲಿರುವ ಶ್ರೇಷ್ಠತೆ ಯುವಕರಿಗೆ ತಿಳಿಸಬೇಕಿದೆ. ನೀವು ಮೌನ ಮುರಿದರೆ, ಸಮಾಜಕ್ಕೆ ಒಳ್ಳೆಯದು.ಇದು ಸಹ ಒಂದು ಅವಕಾಶವೇ ಸರಿ ಎಂದು ಭಾವಿಸಬೇಕು' ಎಂದು ಮನವಿ ಮಾಡಿದರು.

### ಲೆಕ್ಕಾಚಾರದ ಮೇಲೆ ಹೋರಾಟ: ರಮೇಶ್ ಕುಮಾರ್ ವಿಷಾದ

ವಿಧಾನಸಭೆ ಮಾಜಿ ಸ್ಪೀಕರ್‌ಕೆ.ಆರ್. ರಮೇಶ್ ಕುಮಾರ್, 'ಸ್ಪಷ್ಟವಾಗಿ ನೇರವಾಗಿ ಮಾತನಾಡುವ ವಿವಾದಿತರಾಗುತ್ತಾರೆ. ಇವತ್ತು ನಾವು ಲೆಕ್ಕಾಚಾರದ ಮೇಲೆ ಹೋರಾಟ ಮಾಡುವ ಸ್ಥಿತಿಗೆ ಬಂದಿದ್ದೇವೆ. ಯಾವುದೇ ಲೆಕ್ಕಾಚಾರ ಇಲ್ಲದೇ ನಿರ್ದಾಕ್ಷಿಣ್ಯವಾಗಿ, ನಿರ್ಭಯವಾಗಿ ಮಾತನಾಡುತ್ತಿದ್ದ ಬಸವಲಿಂಗಪ್ಪನವರು ಚುನಾವಣೆಯಲ್ಲಿ ಸೋಲು ಕಂಡರು. ಆದರೂ, ಅವರು ಎಂದಿಗೂ ತಮ್ಮ ವಿಚಾರಗಳನ್ನು ಸೋಲಿಸಲು ಅವಕಾಶ ನೀಡಲಿಲ್ಲ. ನೇರವಾಗಿಯೇ ತಮ್ಮ ಕೆಲಸವನ್ನು ಮುಂದುವರಿಸುವ ಮೂಲಕ ಮಾದರಿಯಾದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

# ಹಿಂದಿ ಗ್ರೇಡಿಂಗ್ ಬಗ್ಗೆ ಮಕ್ಕಳ ಜತೆ ಸರ್ಕಾರ ಚೆಲ್ಲಾಟ: ಅಶ್ವತ್ಥ್

**■ ಉದಯವಾಣಿ ಸಮಾಚಾರ**

**ಬೆಂಗಳೂರು:** ರಾಜ್ಯ ಸರ್ಕಾರ ಶಿಕ್ಷಣ

ಇದೇ ಮೊದಲಲ್ಲ. ಏನು ಮಾಡಿದರೂ ನಡೆಯುತ್ತದೆ ಎಂದುಕೊಂಡಿದೆ.

# ಬಸವಲಿಂಗಪ್ಪ ವ್ಯಕ್ತಿಯಲ್ಲ, ಶಕ್ತಿ: ಹೊರಟ್ಟಿ ಬಣ್ಣನೆ

## ಬೆಂಗಳೂರು ವಿಶ್ವವಿದ್ಯಾಲಯದಿಂದ ಹೋರಾಟಗಾರ ದಿ.ಬಸವಲಿಂಗಪ್ಪನವರ ಜನ್ಮ ಶತಮಾನೋತ್ಸವ

**■ ಉದಯವಾಣಿ ಸಮಾಚಾರ**

**ಬೆಂಗಳೂರು:** ಬಸವಲಿಂಗಪ್ಪನವರ ಕೇವಲ



ರಾಜಕಾರಣಗಳ ಮಾದರಿಯಾಗಬೇಕು. ಪ್ರತಿಯೊಬ್ಬರು ಅವರ ಆಶಯವನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

# ರಾಜಕಾರಣಕ್ಕೆ ಬರುವವರಿಗೆ ತರಬೇತಿ ನೀಡಲು ಕಾಲೇಜು?

## ಮಾರ್ಗದರ್ಶನ, ತರಬೇತಿ ನೀಡುವ ಉದ್ದೇಶ | ಉತ್ತಮ ಜನಪ್ರತಿನಿಧಿ ರೂಪಿಸುವ ಗುರಿ: ಸಭಾಪತಿ ಹೊರಟ್ಟಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜಕೀಯಕ್ಕೆ ಬರುವ ಹೊಸಬರಿಗೆ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿ ನೀಡುವ ಉದ್ದೇಶದೊಂದಿಗೆ ರಾಜಕೀಯ ಕಾಲೇಜು ಆರಂಭಿಸುವ ಚಿಂತನೆಯಿದೆ. ಆದರ ಮೂಲಕ ನಾಡಿಗೆ ಜನರ ಕಷ್ಟಗಳನ್ನರಿತು ಕೆಲಸ ಮಾಡುವಂಥ ಉತ್ತಮ ಜನಪ್ರನಿಧಿಗಳನ್ನು ರೂಪಿಸುವ ಉದ್ದೇಶ ಹೊಂದಲಾಗಿದೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ತಿಳಿಸಿದರು.



ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬಸವಲಿಂಗಪ್ಪ ಜನ್ಮ ಶತಮಾನೋತ್ಸವ ಆಚರಣಾ ಸಮಿತಿ, ಬಸವಲಿಂಗಪ್ಪ ಅಭಿವೃದ್ಧಿ ಅಧ್ಯಯನ ಸಂಸ್ಥೆ ಮಂಗಳವಾರ ಆಯೋಜಿಸಿದ್ದ ಬಿ. ಬಸವಲಿಂಗಪ್ಪ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿ, ಮಾಜಿ ಸಚಿವ ಬಿ. ಬಸವಲಿಂಗಪ್ಪ ಅವರು ಡಾ.ಬಿ.ಆರ್. ಅಂಬೇಡ್ಕರ್ ಅವರ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಶೋಷಿತ ಸಮುದಾಯಕ್ಕೆ ಸ್ವಾಭಿಮಾನದ ಬದುಕು ಕಲ್ಪಿಸಿಕೊಡಲು ನಿರಂತರವಾಗಿ ಶ್ರಮಿಸಿದರು. ಅಂಥ ಮಹಾನ್ ಆಡಳಿತಗಾರರ ಕುರಿತು ಈಗಿನ ಯುವ ಪೀಳಿಗೆಗೆ ತಿಳಿಸಬೇಕಿದೆ. ಅಲ್ಲದೆ, ಬಿ.ಬಸವಲಿಂಗಪ್ಪ ಮಾದರಿಯಲ್ಲಿ ಜನಪ್ರತಿನಿಧಿಗಳನ್ನು ಸಿದ್ಧಪಡಿಸುವ ಉದ್ದೇಶದೊಂದಿಗೆ ರಾಜಕೀಯ ಕಾಲೇಜು ಆರಂಭಿಸುವ ಚಿಂತನೆಯಿದೆ. ಆದರ ಮೂಲಕ ರಾಜಕೀಯಕ್ಕೆ ಬರುವ ಹೊಸಬರಿಗೆ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿ ನೀಡಿ ಜನರ ಕಷ್ಟಗಳಿಗೆ ಸ್ಪಂದಿಸುವ, ಸಮಾಜದ ಅಭಿವೃದ್ಧಿಗೆ ಶ್ರಮಿಸುವ ಜನಪ್ರತಿನಿಧಿಗಳನ್ನು ರೂಪಿಸಲಾಗುವುದು ಎಂದರು.

### ನನ್ನ ಮಾತಿಗೆ ಬೆಲೆಯಿಲ್ಲ: ರಮೇಶ್ ಕುಮಾರ್

ನಾನು ಚಲಾವಣೆಯಿಲ್ಲದ ನಾಣ್ಯದಂತಾಗಿದ್ದೇನೆ. ಮಾತನಾಡುವ ಪ್ರತಿ ಅಕ್ಷರವನ್ನೂ ಭಯದಿಂದ ನಿಯಂತ್ರಿಸಿ ಮಾತನಾಡಬೇಕಿದೆ. ಹೀಗಾಗಿ ನಾನು ಮಾತನಾಡುವುದನ್ನೇ ನಿಲ್ಲಿಸಿದ್ದೇನೆ. ನಾನೀಗ ವಿಶ್ರಾಂತದಲ್ಲಿದ್ದೇನೆ ಎಂದು ಕೆ.ಆರ್.ರಮೇಶ್ ಕುಮಾರ್‌ಹೇಳಿದರು. ಅದಕ್ಕೆ ತಮ್ಮ ಭಾಷಣದ ವೇಳೆ ಪ್ರತಿಕ್ರಿಯಿಸಿದ ಎಚ್.ಕೆ. ಪಾಟೀಲ್, ರಮೇಶ್ ಕುಮಾರ್ ಅಂತಹ ನಾಯಕರು ನೋವಾಗಿದ್ದರೂ ಮೌನ ಮುರಿದರೆ ಒಳ್ಳೆಯದು. ಸ್ಥಾನಮಾನದಲ್ಲಿರುವವರನ್ನು ಎಚ್ಚರಿಸಲು ವಿಶ್ರಾಂತದಲ್ಲಿರುವ ತಾವು ಮಾತನಾಡುತ್ತಾ ಎಚ್ಚರಿಸುತ್ತಿರಬೇಕು ಎಂದರು.

**ಹೋರಾಟದ ಹಾದಿಯೇ ತಿಳಿದಿಲ್ಲ:** ಈಗ ಶಾಸನ ಸಭೆಗೆ ಬರುವ ಜನಪ್ರತಿನಿಧಿಗಳಿಗೆ ಬಸವಲಿಂಗಪ್ಪ ಅವರ ವ್ಯಕ್ತಿತ್ವ, ಹೋರಾಟ ಹಾದಿಯೇ ತಿಳಿದಿಲ್ಲ. ಅನೇಕರನ್ನು ಬಸವಲಿಂಗಪ್ಪ ಅವರ ಬಗ್ಗೆ ಪ್ರಶ್ನಿಸಿದರೆ ಮಾಹಿತಿಯೇ ಇಲ್ಲ ಎಂದು ಹೇಳುತ್ತಾರೆ. ಅಂಥವರಿಗೆಲ್ಲ ಮೊದಲು ಗ್ರಂಥಾಲಯಗಳಿಗೆ ತೆರಳಿ ಬಸವಲಿಂಗಪ್ಪ ಅವರ ಬಗ್ಗೆ ತಿಳಿದುಕೊಳ್ಳುವಂತೆ ಹೇಳುತ್ತೇನೆ. ಬಸವಲಿಂಗಪ್ಪ ಅವರು ತಳ ಸಮುದಾಯದ ಏಳಿಗೆಗೆ ಸಾಕಷ್ಟು ಶ್ರಮಿಸಿದರು. ಅವರ ಸಾಧನೆಯನ್ನು ನಾವೆಲ್ಲ ಸ್ಮರಿಸುವ ಮತ್ತು ಅದನ್ನು ಪಾಲಿಸುವ ಕೆಲಸ ಮಾಡಬೇಕು ಎಂದರು.

ಬಸವಲಿಂಗಪ್ಪ ಅವರು ಕನ್ನಡ ಸಾಹಿತ್ಯದ ಬಗೆಗಿನ ಬೂಸಾ ಹೇಳಿಕೆಯಿಂದ ಬೂಸಾ ಹೋರಾಟ ಶುರುವಾಯಿತು. ಅದು ಆರಂಭವಾಗದಿದ್ದರೆ ಸಾಹಿತ್ಯದ ಒಳ-ಹೊರಗಿನ ಚರ್ಚೆಗಳೇ ನಡೆಯುತ್ತಿರಲಿಲ್ಲ. ಆದರಿಂದಲೇ ಸಾಹಿತ್ಯದಲ್ಲೂ ಸಾಕಷ್ಟು ಬದಲಾವಣೆಗಳಾದವು. ಬಸವಲಿಂಗಪ್ಪ ಅವರು ಮಲ ಹೊರುವ ಪದ್ಧತಿ ರದ್ದು ಮಾಡಿ, ದಲಿತರಿಗೆ ಭೂಮಿ ಹಕ್ಕು ನೀಡಲು ಪಿಟಿಸಿಎಲ್ ಕಾಯ್ದೆ ಜಾರಿಗೆ ತಂದರು. ಅವರು ತಳ ಹಂತದ ಜನರ ಹಕ್ಕಿಗಾಗಿ ತಮ್ಮ ಜೀವನವಿಡೀ ಹೋರಾಟ ನಡೆಸಿದರು ಎಂದು ತಿಳಿಸಿದರು.